ನಾರಸಿಂಹನೆಂಬೊ ದೇವನು ನಾರಸಿಂಹನೆಂಬೊ ದೇವನು ।
ನಂಬಿದಂಥ ನರರಿಗೆಲ್ಲ ವರವಕೊಡುವನು । ಪ ।

ಆದಿಯಲ್ಲಿ ಲಕ್ಷ್ಮಿಸಹಿತದಿ ಮಲಗಿರಲು । ಬಂದರಾಗ ಸನತ್ ಕುಮಾರರು ।
ಆಗ ದ್ವಾರಪಾಲಕರು ತಡೆಯಲಾಗ ಕೋಪದಿಂದ ।
ಮೂರು ಜನ್ಮದಲ್ಲಿ ನೀವು ಅಸುರರಾಗಿ ಪುಟ್ಟಿರೆಂದರು । ನಾರಸಿಂಹ ॥ ೧ ॥

ದಿತಿಯ ಗರ್ಭದಲ್ಲಿ ಜನಿಸಿದ ಹಿರಣ್ಯಾಕ್ಷ ಹಿರಣ್ಯಕಶಿಪುರೆಂಬ ಭ್ರಾತೃರು ।
ಪೃಥ್ವಿಯನ್ನು ಮುಳುಗಿಸಿದ ಕಾರಣಾದಿ ಶ್ರೀಹರಿಯು ।
ತೃತೀಯ ರೂಪದಿಂದ ಖಳನ ಕೊಂದು ಧರೆಯನುಳಿಹಿದನು ।ನಾರಸಿಂಹ ॥ ೨ ॥

ಅನುಜನಾದ ಹಿರಣ್ಯಾಕ್ಷನ ಮರಣವನ್ನು ಕೇಳಿ ಆಗ ನಡೆದ ತಪಸ್ಸಿಗೆ ।
ಹರಿಯ ಮೇಲೆ ಸಿಟ್ಟಿನಿಂದ ಉಗ್ರತಪಸ್ಸನ್ನು ಮಾಡಿ ।
ಬ್ರಹ್ಮನಿಂದ ವರಗಳನ್ನು ಪಡೆದುಕೊಂಡು ಬಂದನಾಗ । ನಾರಸಿಂಹ ॥ ೩ ॥

ಇಂದ್ರಲೋಕ ಸೂರೆ ಮಾಡಿದ।ಮೂರು ಲೋಕಕೆ ಅಸುರ ತನ್ನ ಭಯವ ತೋರಿದ ।
ಗರ್ಭಿಣಿ ಕಯಾದುವನ್ನು ಬ್ರಹ್ಮಪುತ್ರ ಬಂದು ಆಗ ।
ದೈತ್ಯನಾದ ಹಿರಣ್ಯಕಶಿಪುವಿಗೆ ಒಪ್ಪಿಸಿದನು । ನಾರಸಿಂಹ ॥ ೪ ॥

ನವಮಾಸಗಳು ತುಂಬಲು । ಕಯಾದು ಆಗ ಪುತ್ರರತ್ನವನ್ನು ಪಡೆದಳು ।
ನಾಮಕರಣವನ್ನು ಮಾಡಿ ವಿಪ್ರರನ್ನು ಕರೆಸಿ ಬೇಗ ।
ದೈತ್ಯ ತನ್ನ ಸುತಗೆ ಪ್ರಹ್ಲಾದನೆಂದು ಕರೆಸಿದನು । ನಾರಸಿಂಹ ॥ ೫ ॥

ಬಾಲಚಂದ್ರನಂತೆ ಹೊಳೆಯುತಾ ಇರುತಿರಲು ಐದು ವರ್ಷ ತುಂಬಿತಾಗಲೆ ।
ಗುರುಗಳನ್ನು ಕರೆಸಿ ಬೇಗ ಸಕಲ ವಿದ್ಯೆ ಕಲಿಸಿರೆಂದು ।
ಗುರುಗಳಿಗೆ ಮಗನನ್ನು ಒಪ್ಪಿಸಿದ ದೈತ್ಯ ತಾನು । ನಾರಸಿಂಹ ॥ ೬ ॥

ಓಂ ನಮ: ಶಿವಾಯ ಎನುತಲಿ । ಅಸುರ ತನ್ನ ಸುತನ ಬರೆದು ತೋರು ಎನ್ನಲು ।
ನರಹರಿಯ ನಾಮವನ್ನು ನಗುನಗುತಲೆ ಬರೆಯುತಿರಲು ।
ಎಡದ ತೊಡೆಯ ಮೇಲಿದ್ದ ಶಿಶುವ ಬಡಿದು ಧರೆಗೆ ನೂಕಿದನು॥ನಾರಸಿಂಹ ॥೭ ॥

ಸುತ್ತ ಜನರ ಕರೆಸಿ ಬೇಗದಿ । ಅಸುರ ತನ್ನ ಸುತನ ಕೊಲ್ಲಿಸಬೇಕು ಎಂದಾಗ ।
ಅಟ್ಟ ಅಡವಿಯೊಳು ವಿಷವನಿಟ್ಟು ಭೋಜನಂಗಳ ಮಾಡಿ ।
ಹರಿಯ ಸ್ಮರಣೆ ಮಾತ್ರದಿಂದ ಭುಂಜಿ ತಿಳಿದ ಜಟ್ಟಿಹಾಂಗೆ ॥ ನಾರಸಿಂಹ ॥ ೮ ॥

ಅಂಬುಧಿಯೊಳು ಮಗನ ಮಲಗಿಸಿ। ಮೇಲೆ ದೊಡ್ಡ ಬೆಟ್ಟವನ್ನು ಇಟ್ಟು ಬನ್ನಿರೋ ।
ಹರಿಯ ಕೃಪೆಗೆ ವಶನಾದ ತರಳನೆಂದು ವರುಣದೇವ ।
ಮರಣ ಇಲ್ಲದಹಾಂಗೆ ಮಾಡಿ ಮನೆಗೆ ಕೊಟ್ಟು ಕಳುಹಿದನು ॥ ನಾರಸಿಂಹ ॥ ೯ ॥

ಬೆಟ್ಟದಿಂದ ಕಟ್ಟಿ ಉರುಳಿಸಿ । ಅಸುರ ತನ್ನ ಪಟ್ಟದಾನೆ ಕಾಲಲಿ ಮೆಟ್ಟಿಸಿ ।
ಹರಿವ ಒಲೆಯ ಮಾಡಿ ಸುಟ್ಟು ಹುಲಿಯ ಬೋನಿನಲ್ಲಿ ಇಟ್ಟು ।
ಯತ್ನವಿಲ್ಲದೆ ಸುತನ ಕೊಲ್ಲಲು ಶಕ್ತನಲ್ಲದೆ ಪೋದನಂತೆ ॥ ನಾರಸಿಂಹ ॥ ೧೦ ॥

ನಿನ್ನ ದೇವ ಇದ್ದ ಎಡೆಯನು। ತೋರು ಎನುತ ಪಿತನು ತನ್ನ ಸುತನ ಕೋರಲು।
ಎನ್ನ ದೇವ ಇಲ್ಲದಂತ ಎಡೆಗಳುಂಟೆ ಲೋಕದಲ್ಲಿ ।
ಕಂಭದಲ್ಲೂ ಇರುವನೆಂದು ಕೈಯ ಮುಗಿದು ತೋರ್ದನಾಗೆ ॥ ನಾರಸಿಂಹ॥೧೧ ॥

ವರಕಂಬವನ್ನು ಒದೆಯಲು । ನರಹರಿಯು ಉಗ್ರಕೋಪವನ್ನು ತಾಳಿದ ।
ಕಟಕಟೆಂಬ ಧ್ವನಿಯ ಮಾಡಿ ನಖಗಳಿಂದ ಪಿಡಿದು ಒತ್ತಿ ।
ಕರುಳ ಬಗೆದು ಮಾಲೆ ಹಾಕಿ ಕಂದ ಭಕ್ತನಪ್ಪಿಕೊಂಡ ॥ ನಾರಸಿಂಹ ॥ ೧೨ ॥

ಅಂತರಿಕ್ಷದಲ್ಲಿ ಅಮರರು । ನೋಡಿ ಆಗ ಪುಷ್ಪವೃಷ್ಟಿಯನ್ನೆ ಕರೆದರು ।
ಅಜನ ಪಡೆದ ದೇವಿ ಬಂದು ತೊಡೆಯ ಮೇಲೆ ಕುಳಿತಿರಲು ।
ಅಮರಪತಿಯರೆಲ್ಲರ ನೋಡಿ ಅಂಜಬೇಡೆಂದಭಯವಿತ್ತ ॥ ನಾರಸಿಂಹ ॥ ೧೩ ॥

ಲಕ್ಷ್ಮಿನಾರಸಿಂಹ ಚರಿತೆಯ । ಉದಯಕಾಲ ಪಠಿಸುವಂತ ನರರಿಗೆಲ್ಲಾ ।
ಪುತ್ರಸಂತಾನಂಗಳಿತ್ತು । ಮತ್ತೆ ಬೇಡಿದಹಾಂಗೆ ಕೊಟ್ಟು ।
ಭಕ್ತವತ್ಸಲ ಮುಕ್ತಿ ಕೊಡುವ । **ಪುರಂದರವಿಠ್ಠಲ**ರಾಯ ॥ ನಾರಸಿಂಹ ॥ ೧೪ ॥

**ಸಂಗ್ರಹ – ನರಹರಿಸುಮಧ್ವ**